ಇ) ಪ್ರಸ್ತುತ ಜಾರಿಯಲ್ಲಿರುವ ಮಹಾಯೋಜನೆಯಲ್ಲಿ ನಗರದ ಕೇಂದ್ರ ಭಾಗದ ಆಯ್ದ ರಸ್ತೆಗಳ ಅಗಲೀಕರಣಕ್ಕೆ ಪ್ರಸ್ತಾಪಿಸಿದ್ದು, ಅಭಿವೃದ್ಧಿಗಳಿಗೆ ಅನುಮತಿಸುವಾಗ ರಸ್ತೆ ಅಗಲೀಕರಣದನ್ವಯ ಅಭಿವೃದ್ಧಿಗಳನ್ನು ನಿಯಂತ್ರಿಸುವುದರಿಂದ ಸಂಚಾರ ಸಮಸ್ಯೆಗಳನ್ನು ಸಾಧ್ಯವಾದಷ್ಟು ಕಡಿಮೆಗೊಳಿಸಬಹುದಾಗಿದೆ. ಆದಾಗ್ಯೂ, ಸಂಚಾರ ದಟ್ಟಣೆ ನಿಯಂತ್ರಣಕ್ಕೆ ಸಂಬಂಧಿಸಿದಂತೆ ನಗರಸಭೆಯು ಸಂಚಾರ ಪೋಲೀಸ್ ವಿಭಾಗದ ಸಹಮತದೊಂದಿಗೆ ಕ್ರಮ ಕೈಗೊಳ್ಳಬೇಕಾಗಿರುತ್ತದೆ.

ಈ) ಈಗಾಗಲೇ ಸಿ.ಎಂ.ಎಸ್.ಎಂ.ಟಿ.ಪಿ ಯೋಜನೆಯಡಿಯಲ್ಲಿ ಮುಖ್ಯ ರಸ್ತೆಯ ಬದಿಯಲ್ಲಿ ಪಾದಚಾರಿ ಮಾರ್ಗಗಳನ್ನು ನಿರ್ಮಿಸಲಾಗಿದೆ.

ತಿರುಪತಿಯ ಆಸ್ತಿ ನಿರ್ವಹಣೆ

42 (164); ಡಾ॥ ಸುಧಾಕರ್ ಕೆ.

ಅ) ರಾಜ್ಯ ಸರ್ಕಾರವು ತಿರುಪತಿಯಲ್ಲಿ ನಿರ್ವಹಿಸುತ್ತಿರುವ ಕಲ್ಯಾಣ ಮಂಟಪಗಳು, ವಸತಿ ನಿಲಯ ಹಾಗೂ ಇತರೆ ಆಸ್ತಿಗಳು ಯಾವುವು, ಅವುಗಳು ಎಲ್ಲೆಲ್ಲಿವೆ (ಮಾಹಿತಿ ನೀಡುವುದು);

ಆ) ಈ ಆಸ್ತಿಗಳು ಸರಿಯಾದ ಬಳಕೆಗೆ ಸರ್ಕಾರ ಕೈಗೊಂಡ ಕ್ರಮಗಳಾವುವು ಸಾರ್ವಜನಿಕರಿಗೆ ಹಾಗೂ ಭಕ್ತರಿಗೆ ಇದರ ಲಾಭ ವ್ಯವಸ್ಥಿತವಾಗಿ ಸಿಗುತ್ತಿದೆಯೇ;

ಇ) ಸೌಲಭ್ಯದ ಸದುಪಯೋಗದ ಕುರಿತು ರಾಜ್ಯ ಸರ್ಕಾರ ಹೊಂದಿರುವ ನಿಯಂತ್ರಣಗಳಾವುವು;

ಈ) ಇವುಗಳ ನಿರ್ವಹಣೆಗೆ ಸರ್ಕಾರ ಮಾಡುತ್ತಿರುವ ವೆಚ್ಚ ಎಷ್ಟು; ಯಾವ ಮೂಲಗಳಿಂದ ಹಣ ನೀಡಲಾಗುತ್ತಿದೆ?

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಪಶುಸಂಗೋಪನಾ ಮತ್ತು ಮುಜರಾಯಿ ಸಚಿವರು)

ಅ) ಕರ್ನಾಟಕ ರಾಜ್ಯ ಛತ್ರ, ಗಾಂಧಿ ರಸ್ತೆ, ತಿರುಪತಿಯಲ್ಲಿ ಸುಮಾರು 45 ಸೆಂಟ್ಸ್ ಜಾಗದಲ್ಲಿ ಕಲ್ಯಾಣ ಮಂಟಪ, ಕೊಠಡಿಗಳು ಹಾಗೂ 9 ವಾಣಿಜ್ಯ ಮಳಿಗೆಗಳಿರುತ್ತವೆ. ವಾಣಿಜ್ಯ ಮಳಿಗೆಗಳನ್ನು ಹೊರತುಪಡಿಸಿ ಉಳಿದೆಲ್ಲವು ಶಿಥಿಲಾವಸ್ಥೆಯಲ್ಲಿರುತ್ತವೆ.

ತಿರುಚಾನೂರಿನ ಶ್ರೀ ಪದ್ಮಾವತಿ ಅಮ್ಮನವರ ದೇವಸ್ಥಾನದ ಹಿಂಭಾಗದ ಪುಷ್ಕರಿಣಿಯ ಮುಂಭಾಗದಲ್ಲಿ ಸುಮಾರು 14 ಸೆಂಟ್ಸ್ ಜಾಗದಲ್ಲಿ ನೂತನ ಕಲ್ಯಾಣ ಮಂಟಪವನ್ನು ನಿರ್ಮಿಸಲಾಗಿದೆ. ಇದರಲ್ಲಿ 29 ಕೊಠಡಿಗಳು, ಡೈನಿಂಗ್ ಹಾಲ್ ಮತ್ತು ವಾಹನ ನಿಲುಗಡೆ ಸೌಕರ್ಯ ಇರುತ್ತದೆ.

ರಾಜ್ಯದ ಛತ್ರ ತಿರುಮಲದಲ್ಲಿ ಪ್ರವಾಸಿ ಸೌಧ ಕಟ್ಟಡವಿದ್ದು, ಇದರಲ್ಲಿ 86 ಕೊಠಡಿಗಳು, 1 ಕಲ್ಯಾಣ ಮಂಟಪ ಇದರಲ್ಲಿ 8 ಕೊಠಡಿಗಳು, 07 ಕುಠೀರಗಳು ಹಾಗೂ 14, ಕೆ–1, ಕೆ–2 ವಸತಿ ಗೃಹಗಳಿರುತ್ತವೆ.

ಆ) ತಿರುಪತಿಯಲ್ಲಿ ಹಾಲಿ ಶಿಥಿಲಾವಸ್ಥೆಯಲ್ಲಿರುವ ಕಟ್ಟಡವನ್ನು ನೆಲಸಮಗೊಳಿಸಿ ನೂತನ ಕಟ್ಟಡದ ನಿರ್ಮಾಣ ಮಾಡುವ ಪ್ರಸ್ತಾವನೆ ಪರಿಶೀಲನೆಯಲ್ಲಿರುತ್ತದೆ. ತಿರುಚಾನೂರಿನ ಕಲ್ಯಾಣ ಮಂಟಪವನ್ನು ಸರಿಯಾದ ರೀತಿಯಲ್ಲಿ ಭಕ್ತಾಧಿಗಳಿಗೆ ಹಂಚಿಕೆ ಮಾಡಲು ಆರಂಭಿಸಲಾಗಿದೆ.

ಇ) ರಾಜ್ಯ ಛತ್ರ ತಿರುಮಲದ, ಪ್ರವಾಸಿ ಸೌಧ ಕಟ್ಟಡದಲ್ಲಿ 20 ಕೊಠಡಿಗಳನ್ನು ಬೆಂಗಳೂರು ಒನ್ ಮುಖಾಂತರ 60 ದಿನಗಳ ಮುಂಗಡವಾಗಿ ಕಾಯ್ದಿರಿಸುವ ಸೌಲಭ್ಯವನ್ನು ಒದಗಿಸಲಾಗಿರುತ್ತದೆ. ಕಲ್ಯಾಣ ಮಂಟಪ ಹಾಗೂ ಕೊಠಡಿಗಳನ್ನು ಹಂಚಿಕೆ ಮಾಡುವಾಗ ಕರ್ನಾಟಕದವರಿಗೆ ಆದ್ಯತೆ ನೀಡಲಾಗುತ್ತಿದ್ದು, ಖಾಲಿ ಇದ್ದ ಸಂದರ್ಭದಲ್ಲಿ ಇತರೆ ಭಕ್ತಾಧಿಗಳಿಗೆ ಹಂಚಿಕೆ ಮಾಡಲಾಗುತ್ತಿದೆ. ತಿರುಚಾನೂರಿನಲ್ಲಿ ನೇರವಾಗಿ

ಭಕ್ತಾಧಿಗಳಿಗೆ ಕೊಠಡಿಯನ್ನು ಪಡೆಯಲು ಅವಕಾಶ ಕಲ್ಪಿಸಲಾಗಿರುತ್ತದೆ. ತಿರುಮಲ ಮತ್ತು ತಿರುಚಾನೂರಿನ ಕೊಠಡಿಗಳನ್ನು ಭಕ್ತಾಧಿಗಳ ಸೌಲಭ್ಯಕ್ಕಾಗಿ ಬೆಂಗಳೂರು ಒನ್ ಮುಖಾಂತರ ಮತ್ತಷ್ಟು ಕೊಠಡಿಗಳನ್ನು ಮುಂಗಡ ಕಾಯ್ದಿರಿಸುವ ಕೆಲಸ ಪ್ರಗತಿಯಲ್ಲಿರುತ್ತದೆ.

ಈ) ವಸತಿ ಗೃಹ, ಕಲ್ಯಾಣ ಮಂಟಪ ನಿರ್ವಹಣೆಗಾಗಿ ಸರ್ಕಾರದಿಂದ ಯಾವುದೇ ಅನುದಾನವನ್ನು ಒದಗಿಸುತ್ತಿಲ್ಲ. ಛತ್ರದ ವಸತಿ ಗೃಹದ ಕೊಠಡಿಗಳಿಂದ ಹಾಗೂ ಕಲ್ಯಾಣ ಮಂಟಪಗಳಿಂದ ಬರುವ ಆದಾಯದಿಂದ ವೆಚ್ಚವನ್ನು ಭರಿಸಲಾಗುತ್ತಿದೆ.

ಪೊಲೀಸ್ ಠಾಣೆ ಪ್ರಾರಂಭಿಸುವುದು

44 (221); ಶ್ರೀ ಈಶ್ವರ ಭೀಮಣ್ಣ ಖಂಡ್ರೆ (ಭಾಲ್ಕಿ)

ಅ) ಬೀದರ್ ಜಿಲ್ಲೆಯ ಬಾಲ್ಕಿ ತಾಲ್ಲೂಕಿನ ಗಡಿ ಭಾಗದ ಮೆಹಕರ್ ಗ್ರಾಮದಲ್ಲಿ ಹೊಸದಾಗಿ ಠಾಣೆಯನ್ನು ಹಾಗೂ ಭಾಲ್ಕಿ ಪಟ್ಟಣದಲ್ಲಿ ಹೊಸದಾಗಿ ಸಂಚಾರಿ ಠಾಣೆ ಪ್ರಾರಂಭಿಸುವುದಾಗಿ ಸರ್ಕಾರ ಭರವಸೆ ನೀಡಿರುವುದು ನಿಜವಲ್ಲವೆ;

ಆ) ಹಾಗಿದ್ದಲ್ಲಿ, ಸರ್ಕಾರದ ಭರವಸೆಯಂತೆ ಈ ಎರಡು ಠಾಣೆಗಳನ್ನು ಈ ಸಾಲಿನಲ್ಲಿಯೇ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಕೆ.ಜೆ. ಜಾರ್ಜ್ (ಗೃಹ ಸಚಿವರು)

ಅ) ಮೆಹಕರ್ ಗ್ರಾಮದಲ್ಲಿ ಹೊಸದಾಗಿ ಪೊಲೀಸ್ ಠಾಣೆ ಸೃಜಿಸಿ ಆದೇಶ ಸಂಖ್ಯೆ: ಹೆಚ್‌ಡಿ/177/ಪಿಓಪಿ/ 2014, ದಿನಾಂಕ:29–01–2015 ರಲ್ಲಿ ಮಂಜೂರಾತಿಯನ್ನು ನೀಡಿದೆ. ಭಾಲ್ಕಿ ಪಟ್ಟಣದಲ್ಲಿ ಸಂಚಾರ ಪೊಲೀಸ್ ಠಾಣೆ ತೆರೆಯುವ ಪ್ರಸ್ತಾವನೆಯು ಇಲಾಖಾ ಹಂತದಲ್ಲಿ ಪರಿಶೀಲನೆಯಲ್ಲಿರುತ್ತದೆ.